**ಮೇ: ಪ್ರಧಾನ ಹಿರಿಯ ಸಿವಿಲ್ ವ ಜೆ.ಎಮ್.ಎಫ್.ಸಿ. ನ್ಯಾಯಾಲಯ**
**ಬಸವನ-ಬಾಗೇವಾಡಿ**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಾಜಿ ಜೋಶಿ. |
| ತಂದೆಯ ಹೆಸರು | : | ಧರ್ಮಾಜಿ ಜೋಶಿ. |
| ವಯಸ್ಸು | : | 58 ವರ್ಷ. |
| ಉದ್ಯೋಗ | : | ಅಬಕಾರಿ ಉಪ ನಿರೀಕ್ಷಕರು, |
| ವಾಸಸ್ಥಳ | : | ಬಾಗಲಕೋಟೆ. |

**ಸಾಕ್ಷಿಯನ್ನು ಇಂದು ದಿನಾಂಕ: 16-05-2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**

**ಮುಖ್ಯ ವಿಚಾರಣೆ: ಎ.ಪಿ.ಪಿ.ಯವರಿಂದ**

1) ದಿನಾಂಕ: 10-07-2025 ರಂದು ಸಾಯಂಕಾಲ 5-00 ಗಂಟೆಗೆ ನಾನು ಕಛೇರಿಯಲ್ಲಿದ್ದಾಗ, ಚಾಸಾ-1 ರವರಿಗೆ ಬಾತ್ಮಿ ಬಂದಿದ್ದು ಇರುತ್ತದೆ. ನಂತರ, ನಾನು, ಚಾಸಾ-1, ಚಾಸಾ-3 ಮತ್ತು 4 ರವರು ಕೂಡಿಕೊಂಡು ನಮ್ಮ ಕಛೇರಿ ವಾಹನ ಸಂಖ್ಯೆ KA-28/G-0575 ನೇದ್ದರಲ್ಲಿ ಬಸವನ ಬಾಗೇವಾಡಿ ತಾಲೂಕಿನ ಬೂದಿಹಾಳ ಗ್ರಾಮದಿಂದ ಶರಣಸೋಮನಾಳ ಗ್ರಾಮದ ಡಾ||ಬಿ.ಆರ್.ಅಂಬೇಡ್ಕರ್ ಸರ್ಕಲ್ ಹತ್ತಿರ ಹೋಗುತ್ತಿದ್ದಂತೆ, ಒಬ್ಬ ಮೋಟಾರ್ ಸೈಕಲ್ ಸವಾರನು ನಮ್ಮ ವಾಹನವನ್ನು ನೋಡಿ ಮೋಟಾರ್ ಸೈಕಲ್ ಅನ್ನು ರಸ್ತೆಯ ಮೇಲೆ ಬಿಟ್ಟು ಗ್ರಾಮದ ಉತ್ತರ ದಿಕ್ಕಿನ ಸಂದಿಗಳಲ್ಲಿ ಓಡಿಹೋದನು. ಸಂಶಯಗೊಂಡ ನಾವು ಸದರಿ ವ್ಯಕ್ತಿಯನ್ನು ಹಿಡಿಯಲು ಪ್ರಯತ್ನಿಸಿದರೂ ಸಹ ಆತನು ರಭಸವಾಗಿ ಓಡಿ ಹೋಗಿ ಪರಾರಿಯಾದನು. ನಂತರ ಮೋಟಾರ್ ಸೈಕಲ್ ಬಿಟ್ಟು ಹೋದಂತಹ ಸ್ಥಳಕ್ಕೆ ಬಂದು ಹತ್ತಿರ ನಿಂತಿದ್ದ ಸ್ಥಳೀಯರನ್ನು ಕರೆದು ಪಂಚರಾಗಲು ಕೇಳಿದಾಗ, ಅವರು ನಿರಾಕರಿಸಿರುತ್ತಾರೆ. ಆಗ ನನಗೆ ಮತ್ತು 3 ರವರಿಗೆ ಚಾಸಾ-1 ರವರು ನೋಟೀಸು ನೀಡಿ ಪಂಚರಾಗಲು ಹೇಳಿದಾಗ, ನಾವು ನೋಟೀಸುಗಳನ್ನು ಸ್ವೀಕರಿಸಿಕೊಂಡು ಪಂಚರಾಗಿ ಕಾರ್ಯನಿರ್ವಹಿಸಿರುತ್ತೇವೆ. ನಂತರ ಚಾಸಾ-1 ರವರು

ಶೋಧನಾ ಸಮೂಚಿತ ವರದಿಯನ್ನು ತಯಾರಿಸಿಕೊಂಡು ನನ್ನ ಮತ್ತು ಚಾಸಾ-3 ರವರ ಸಹಿಗಳನ್ನು ಪಡೆದುಕೊಂಡು ಸದರಿ ಮೋಟಾರ್ ಸೈಕಲ್ ಅನ್ನು ಶೋಧನೆ ಮಾಡಲಾಗಿ ಸದರಿ ಮೋಟಾರ್ ಸೈಕಲ್ ನ ಪೆಟ್ರೋಲ್ ಟ್ಯಾಂಕ್ ಮೇಲೆ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು, ಅದನ್ನು ಅದನ್ನು ಬಿಚ್ಚಿ ಎಣಿಸಿ ನೋಡಲಾಗಿ ಅದರಲ್ಲಿ 90 ಎಮ್.ಎಲ್.ನ 70 ಓರಿಜಿನಲ್ ಚಾಯ್ಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಇದ್ದು, ಅದರಂತೆ ಸದರಿ ಮೋಟಾರ್ ಸೈಕಲ್ ಸೈಡ್ ಬ್ಯಾಗಿನಲ್ಲಿ 180 ಎಮ್.ಎಲ್.ನ 10 ಬ್ಯಾಗ್ ಪೈಪರ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು ಇದ್ದು, 180 ಎಮ್.ಎಲ್.ನ ಮೂರು ಇಂಪಿರಿಯಲ್ ಬ್ಲ್ಯೂ ವಿಸ್ಕಿ ಮದ್ಯ ತುಂಬಿದ ಗಾಜಿನ ಬಾಟಲ್ ಗಳು ಇದ್ದು, ಒಟ್ಟು 8.640 ಲೀಟರ್ ಮದ್ಯ ಇರುವುದು ಕಂಡುಬಂದಿತು. ಆಗ ಸಮಯ ಸಾಯಂಕಾಲ 5-40 ಗಂಟೆಯಾಗಿತ್ತು. ನಂತರ ಸದರಿ ಮೋಟಾರ್ ಸೈಕಲ್ ಅನ್ನು ಪರಿಶೀಲನೆ ಮಾಡಲಾಗಿ ಅದು ಕೆಂಪು ಮತ್ತು ಕಪ್ಪು ಪಟ್ಟಿಯುಳ್ಳ ಹಿರೋ ಹೋಂಡಾ ಕಂಪನಿಯ ಪ್ಯಾಷನ್ ಪ್ರೋ ಮೋಟಾರ್ ಸೈಕಲ್ ಆಗಿದ್ದು, ಅದರ ನೋಂದಣಿ ಸಂಖ್ಯೆ KA-28/Y-7342 ನಮೂದು ಇರುವುದು ಕಂಡುಬಂದಿತು. ನಂತರ ಸದರಿ ಮೋಟಾರ್ ಸೈಕಲ್ ಹಾಗೂ ಮುದ್ದೇಮಾಲನ್ನು ವಶಕ್ಕೆ ಪಡೆದುಕೊಂಡು ನಂತರ ಸದರಿ ಮುದ್ದೇಮಾಲಿನಿಂದ 1 ರಿಂದ 90 ಎಮ್.ಎಲ್. 25 ಓರಿಜಿನಲ್ ಚಾಯ್ಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು, 180 ಎಮ್.ಎಲ್.ನ 05 ಬ್ಯಾಗ್ ಪೈಪರ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕೇಟ್ ಗಳು, 180 ಎಮ್.ಎಲ್.ನ ಮೂರು ಇಂಪಿರಿಯಲ್ ಬ್ಲ್ಯೂ ವಿಸ್ಕಿ ಮದ್ಯ ತುಂಬಿದ ಗಾಜಿನ ಬಾಟಲ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಶ್ಯಾಂಪಲ್ ತೆಗೆದು ಪ್ರತ್ಯೇಕವಾಗಿ ಶೀಲ್ ಮಾಡಲಾಯಿತು. ಕೃತ್ಯ ಕುರಿತು ಶೋಧನೆ ಮತ್ತು ಜಪ್ತಿ ಕಾರ್ಯವನ್ನು ಚಾಸಾ-4 ರವರು ವಿವೋ ಕಂಪನಿಯ Y-200E-5G ಮಾಡೇಲ್ ಮೊಬೈಲ್ ನಲ್ಲಿ ಪೋಟೋ ಮತ್ತು ವಿಡಿಯೋಗ್ರಫಿ ಮಾಡಿರುತ್ತಾರೆ. ಘಟನಾ ಸ್ಥಳದ ಚಕಬಂದಿ: ಪೂರ್ವಕ್ಕೆ: ಪಂಚರ ಅಂಗಡಿ ಇರುತ್ತದೆ, ಪಶ್ಚಿಮಕ್ಕೆ: ಡಾ||

ಬಿ.ಆರ್.ಅಂಬೇಡ್ಕರ್ ರವರ ಸರ್ಕಲ್ ಇರುತ್ತದೆ, ಉತ್ತರಕ್ಕೆಃ ಖುಲ್ಲಾ ಜಾಗೆ ಇರುತ್ತದೆ ಹಾಗೂ ದಕ್ಷಿಣಕ್ಕೆಃ ಗುಳಬಾಳ-ಶರಣಸೋಮನಾಳ ರಸ್ತೆ ಇರುತ್ತದೆ. ನಂತರ ಘಟನಾ ಸ್ಥಳದಲ್ಲಿ ಸಾಯಂಕಾಲ 5-40 ರಿಂದ 5-55 ಗಂಟೆವರೆಗೆ ಪಂಚನಾಮೆಯನ್ನು ಮಾಡಲಾಯಿತು. ಸದರಿ ಪಂಚನಾಮೆಯನ್ನು ಚಾಸಾ-1 ರವರ ನಿರ್ದೇಶನದಂತೆ ನಾನೇ ಬರೆದಿರುತ್ತೇನೆ. ಸದರಿ ಪಂಚನಾಮೆಗೆ ದಸ್ತೂರ ಸಹಿ ಮಾಡಿರುತ್ತೇನೆ ಹಾಗೂ ಅದೇ ದಿನ ಚಾಸಾ-7 ರವರ ಮುಂದೆ ಹೇಳಿಕೆ ನೀಡಿರುತ್ತೇನೆ.

2) ಸಾಕ್ಷಿಗೆ ನಿಪಿ-3 ಶೋಧನಾ ಸಮೂಚಿತ ವರದಿಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಶೋಧನಾ ಸಮೂಚಿತ ವರದಿಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-4 ಘಟನಾ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಘಟನಾ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಹಾಗೂ ದಸ್ತೂರ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-5 ಮಾಲುಪಟ್ಟಿಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಾಲುಪಟ್ಟಿಯನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-6 ಮಾದರಿ ಶೀಲ್ ನಕಲನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಾದರಿ ಶೀಲ್ ನಕಲನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ಪಂಚರಿಗೆ ನೋಟೀಸು ನೀಡಲಾಗಿದ್ದು, ಅದನ್ನು ನಾನು ಸ್ವೀಕರಿಸಿಕೊಂಡಿರುತ್ತೇನೆ. ಸದರಿ ನೋಟೀಸನ್ನು ಈಗಾಗಲೇ ನಿಪಿ-8 ಎಂದು

ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 3 ಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ.SRD ವಕೀಲರಿಂದ**

3) ಆ ದಿನ ಸಾಯಂಕಾಲ 5-00 ಗಂಟೆಗೆ ನಮ್ಮ ಬಸವನ ಬಾಗೇವಾಡಿಯ ಕಛೇರಿಯನ್ನು ಬಿಟ್ಟಿರುತ್ತೇವೆ. ಬೂದಿಹಾಳ ಮಾರ್ಗವಾಗಿ ಸೋಮನಾಳ ಗ್ರಾಮಕ್ಕೆ ಹೋಗಿರುತ್ತೇವೆ. ಶರಣಸೋಮನಾಳ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುತ್ತಾರೆ ಎಂಬುದರ ಬಗ್ಗೆ ಈ ಹಿಂದೆ ನನಗೆ ಮಾಹಿತಿ ಇರಲಿಲ್ಲ. ಸದರಿ ಗ್ರಾಮಕ್ಕೆ ನಮ್ಮ ಕಛೇರಿ ವಾಹನದಲ್ಲಿ ಹೋಗಿರುತ್ತೇವೆ. ಸದರಿ ವಾಹನದಲ್ಲಿ ನಾನು ಮದ್ಯದ ಆಸನದಲ್ಲಿ ಕುಳಿತುಕೊಂಡು ಪ್ರಯಾಣಿಸುತ್ತಿದ್ದೆ. ಆ ದಿನ ಆರೋಪಿಯ ಮುಖಚರ್ಯವನ್ನು ನಮಗೆ ನೋಡಲಿಕ್ಕೆ ಸಾಧ್ಯವಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾನು ವಾಹನದ ಮದ್ಯದ ಆಸನದಲ್ಲಿ ಕುಳಿತುಕೊಂಡು ಪ್ರಯಾಣಿಸುತ್ತಿದ್ದುದರಿಂದ, ಮುಂದಿನ ರಸ್ತೆ ನನಗೆ ಕಾಣಿಸುತ್ತಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಮ್ಮ ಇಲಾಖಾ ವಾಹನ ಶರಣಸೋಮನಾಳ ಗ್ರಾಮ ತಲುಪಿದಾಗ, ಸಾಯಂಕಾಲ 5-30 ಗಂಟೆಯಾಗಿತ್ತು. ಸದರಿ ಆರೋಪಿತನು ಆ ದಿನ ರಸ್ತೆಯ ಪಕ್ಕದಲ್ಲಿ ತನ್ನ ಮೋಟಾರ್ ಸೈಕಲ್ ಅನ್ನು ನಿಲ್ಲಿಸಿ ಉತ್ತರ ದಿಕ್ಕಿಗೆ ಓಡಿಹೋಗಿರುತ್ತಾನೆ. ಆರೋಪಿತನು ಮೋಟಾರ್ ಸೈಕಲ್ ನಿಲ್ಲಿಸಿದ್ದಾನೆ ಎಂದು ಹೇಳಲಾದ ಸ್ಥಳ ನಾಲ್ಕು ರಸ್ತೆಗಳಿಂದ ಕೂಡಿದಂತಹ ಒಂದು ಸರ್ಕಲ್ ಆಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಆ ದಿನ ಆರೋಪಿತನು ತನ್ನ ಮೋಟಾರ್ ಸೈಕಲ್ ನಿಲ್ಲಿಸಿದ ಜಾಗದ ಚಕಬಂದಿ: ಪೂರ್ವಕ್ಕೆ: ಪಂಚರ ಅಂಗಡಿ, ಪಶ್ಚಿಮಕ್ಕೆ: ಡಾ||ಬಿ.ಆರ್.ಅಂಬೇಡ್ಕರ್ ಸರ್ಕಲ್, ಉತ್ತರಕ್ಕೆ: ಖುಲ್ಲಾ ಜಾಗೆ ಹಾಗೂ ದಕ್ಷಿಣಕ್ಕೆ: ಗುಳಬಾಳ ಮತ್ತು ಶರಣಸೋಮನಾಳ ಗ್ರಾಮಕ್ಕೆ

ಹೋಗುವಂತಹ ರಸ್ತೆ ಇರುತ್ತದೆ. ಮೋಟಾರ್ ಸೈಕಲ್ ನ ಮೇಲಿರುವ ಮದ್ಯದ ಚೀಲವನ್ನು ಬಿಚ್ಚುವ ಮೊದಲೇ ಪಂಚರನ್ನು ನೇಮಕ ಮಾಡಿಕೊಳ್ಳಲು ಪ್ರಯತ್ನಿಸಿರುತ್ತೇವೆ. ಚಾಸಾ-1 ರವರು ಪಂಚರನ್ನಾಗಿ ನೇಮಕ ಮಾಡಿಕೊಳ್ಳಲು ಪ್ರಯತ್ನಿಸಿರುವುದು ಹಾಗೂ ನಮ್ಮನ್ನು ಪಂಚರನ್ನಾಗಿ ಮಾಡಿಕೊಂಡಿರುವ ಒಟ್ಟು ಸಮಯ ಐದು ನಿಮಿಷ ಆಗಿರುತ್ತದೆ. ಮೊದಲು ಶೋಧನಾ ಸಮೂಚಿತ ವರದಿ, ಪಂಚರಿಗೆ ನೋಟೀಸುಗಳನ್ನು ಐದು ನಿಮಿಷಗಳ ಅಂತರದಲ್ಲಿ ಬರೆಯಲಾಗಿರುತ್ತದೆ. ಪಂಚನಾಮೆಯನ್ನು 15 ನಿಮಿಷಗಳ ಕಾಲ ಬರೆಯಲಾಗಿರುತ್ತದೆ. ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 3 ರಂತಿರುವ ಮುದ್ದೇಮಾಲುಗಳು ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತವೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತಹ ಎಲ್ಲ ವಿಷಯಗಳು ಸುಳ್ಳು ಇವೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿತನು ಯಾವುದೇ ಆರೋಪ ಮಾಡಿಲ್ಲದಿದ್ದರೂ ಸಹ, ಚಾಸಾ-1 ರವರು ನಮ್ಮ ಮೇಲಾಧಿಕಾರಿಗಳು ಆಗಿರುವುದರಿಂದ, ಅವರ ಮಾತು ಕೇಳಿಕೊಂಡು ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಅದೆ

ಪ್ರಧಾನ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.